**ಓ.ಎಸ್. ನಂ. 97/2022** **ಪಿ.ಡಬ್ಲ್ಯೂ- 3**

**<u>ಸಾಕ್ಷಿಯನ್ನು ದಿನಾಂಕ 6.10.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲುಃ 1 ರಿಂದ 5 ಮತ್ತು 8 ನೇ ಪ್ರತಿವಾದಿ ಪರ ಶ್ರೀ ಟಿ.ಜಿ.ಎಸ್ ವಕೀಲರಿಂದಃ</u>

ನಾನು ಮತ್ತು ಪ್ರತಿವಾದಿಯರು ಒಂದೇ ಊರಿನವರು ಎಂದರೆ ಸರಿ. ಒಂದೇ ಊರಿನವರಾಗಿರುವುದರಿಂದ ಪ್ರತಿವಾದಿಯರ ಮನೆ ವಿಚಾರ ನನಗೆ ಗೊತ್ತಿರುತ್ತದೆ. 1 ನೇ ಪ್ರತಿವಾದಿಗೆ ಮೊದಲನೇ ಹೆಂಡತಿ ಇರುತ್ತಾರೆ ಎಂದರೆ ಸರಿ. ಅದೇ ರೀತಿ ಮೊದಲನೇ ಹೆಂಡತಿಯಿಂದ ಒಬ್ಬ ಮಗಳು ಇರುತ್ತಾರೆ ಎಂದರೆ ಸರಿ. ವಾದಿಯು ನನ್ನ ಸಂಬಂಧಿಕರಾಗಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಬೋಗ್ಯ ಮಾಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ, ಸಾಕ್ಷಿದಾರರು ಮುಂದುವರಿದು ಕರಾರುಪತ್ರ ಮಾಡಿಕೊಟ್ಟಿರುತ್ತಾರೆ ಎನ್ನುವರು. ಕರಾರುಪತ್ರ ಮಾಡಿಕೊಳ್ಳುವ ಮೊದಲು ಮಾತುಕತೆಯಾಗಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನಾನು ದಿನಾಂಕ 27.10.2016 ರಂದು ಬೆಳಿಗ್ಗೆ 11 ಗಂಟೆಯಲ್ಲಿ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ನನ್ನನ್ನು ವಾದಿ ಕರೆದುಕೊಂಡು ಬಂದಿರುತ್ತಾರೆ. ನಿಪಿ2 ಕರಾರುಪತ್ರವನ್ನು ಮುರಳಿ ಎಂಬುವವರು ಬರೆದಿರುತ್ತಾರೆ. ನಿಪಿ2 ರಲ್ಲಿ ಬರೆದಿರುವ ವಿಚಾರ ಗೊತ್ತಿರುತ್ತದಾ ಎಂದರೆ ಸಾಕ್ಷಿದಾರರು ಕ್ರಯದ ಕರಾರುಪತ್ರ ಎಂದು ಬರೆಯಲಾಗಿರುತ್ತದೆ ಎನ್ನುವರು. ಸದರಿ ದಾಖಲೆಯನ್ನು ಪತ್ರಬರಹಗಾರ ಮುರಳಿ ಓದಿ ಹೇಳಿರುತ್ತಾರೆ. ಸದರಿ ದಾಖಲೆಯನ್ನು ನೋಂದಣಿ ಕಛೇರಿಯಲ್ಲಿ ಓದಿ ಹೇಳಲಾಗಿರುತ್ತದೆ. ಸದರಿ ಸಮಯದಲ್ಲಿ ನಾನು, ವಾದಿ ಸಾಕ್ಷಿ-2, ಚಕ್ಕೂರಿನ ಹೆಸರು ಗೊತ್ತಿಲ್ಲದ ಒಬ್ಬರು ಹಾಜರಿದ್ದರು. ನಿಪಿ2 ಕ್ಕೆ ನಾನು ಮತ್ತು ವಾದಿ ಸಾಕ್ಷಿ-2 ಸಹಿ ಮಾಡಿರುತ್ತೇವೆ. ಸದರಿ ದಿನ ಪಕ್ಷಗಾರರ ಸಹಿ ಪಡೆದು ನೋಂದಣಿಯಾದ ನಂತರ ಹಣವನ್ನು ನೀಡಲಾಗಿರುತ್ತದೆ. ಹಣವನ್ನು ನೋಂದಣಿ ಕಛೇರಿಯ ಹೊರಭಾಗ ಕೊಟ್ಟಿರುತ್ತಾರೆ. ಸದರಿ ದಿನ 2000 ಮುಖಬೆಲೆಯ ನೋಟುಗಳನ್ನು ನೀಡಿರುತ್ತಾರೆ. ಒಟ್ಟು 5.30 ಲಕ್ಷ ಹಣ ನೀಡಲಾಗಿರುತ್ತದೆ. ಸದರಿ ಸಮಯದಲ್ಲಿ ನಾನು, ವಾದಿ ಸಾಕ್ಷಿ-2, ವಾದಿ, 7 ಪ್ರತಿವಾದಿ ಮತ್ತು ಇತರ 4-5 ಜನ ಹಾಜರಿದ್ದರು. ಕರಾರುಪತ್ರದಲ್ಲಿ ನಮೂದಿಸಿರುವ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ಪತ್ರಬರಹಗಾರು ಯಾವ ಸರ್ವೆ ನಂಬರ್ ಮತ್ತು ಚಕ್ಕುಬಂದಿ ಎಂದು ಹೇಳಿರುವುದಿಲ್ಲ. ಸುಮಾರು 12.30 ಗಂಟೆ ಸಮಯದಲ್ಲಿ ನಾನು ಸಹಿ ಮಾಡಿ ನೋಂದಣಿ ಕಛೇರಿಯಿಂದ ಹೊರಗಡೆ ಬಂದಿರುತ್ತೇನೆ. ಸಬ್‌ರಿಜಿಸ್ಟ್ರರ್ ಸಮಕ್ಷಮ ಹಣ ನೀಡಿರುವುದಿಲ್ಲ. ನಿಪಿ2 ರಲ್ಲಿ ಬರೆದಿರುವ ವಿಚಾರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿಯರು ಹಣದ ಭದ್ರತೆಗೆ ಕರಾರುಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ಆಸ್ತಿಯ ಕ್ರಯವಾಗಿರುತ್ತದೆ ಎನ್ನುವರು. ಹೆಗ್ಗಡಹಳ್ಳಿ ಗ್ರಾಮದಲ್ಲಿ 2016 ರಲ್ಲಿ ಪ್ರತಿ ಎಕರೆ ಜಮೀನಿಗೆ 3.25 ಲಕ್ಷ ಮೌಲ್ಯವಿತ್ತು. ಈಗ ಹೆಗ್ಗಡಹಳ್ಳಿ ಗ್ರಾಮದಲ್ಲಿ ಪ್ರತಿ ಎಕರೆಗೆ 25 ಲಕ್ಷ ಮೌಲ್ಯ ಇರುತ್ತದೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು 2016 ರಲ್ಲಿ ಮೇಲೆ ಹೇಳಿದ ಮೌಲ್ಯವೇ ಇತ್ತು ಎನ್ನುವರು. 2016 ರಲ್ಲಿ ಹೆಗ್ಗಡಹಳ್ಳಿಯಲ್ಲಿ

ಎಕರೆ ಜಮೀನಿಗೆ 15 ಲಕ್ಷ ಬೆಲೆ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಯರು ಸಾಲದ ಭದ್ರತೆಗಾಗಿ ದಾಖಲಾತಿಯನ್ನು ಬರೆದುಕೊಟ್ಟಿದ್ದು ನಾನು ವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ2 ರಲ್ಲಿ ಬರೆದಿರುವ ವಿಚಾರ ಗೊತ್ತಿರದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.